<u>ಸಾಕ್ಷಿಯನ್ನು ದಿನಾಂಕ **18.11.2022** ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ 2 ಮತ್ತು 3 ನೇ ಪ್ರತಿವಾದಿ ಪರ ವಕೀಲರಿಂದಃ</u>

ದಿನಾಂಕ 12.8.1986 ರಲ್ಲಿ 1 ನೇ ಪ್ರತಿವಾದಿ ಮತ್ತು ಅವರ ಅಣ್ಣತಮ್ಮಂದಿರು ಮೌಖಿಕವಾಗಿ ದಾವಸ್ವತ್ತು ಮತ್ತು ಅವರ ಕುಟುಂಬದ ಎಲ್ಲಾ ಸ್ವತ್ತುಗಳನ್ನು ಪಾಲುಪಟ್ಟಿ ಮೂಲಕ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ವಿಭಾಗದಲ್ಲಿ ದಾವಾಸ್ವತ್ತು 1 ನೇ ಪ್ರತಿವಾದಿ ಪಾಲಿಗೆ ಬಂದಿರುತ್ತದೆ ಎಂದರೆ ಗೊತ್ತಿಲ್ಲ. ನಾನು ಮತ್ತು 2 ನೇ ಪ್ರತಿವಾದಿ ಒಂದೇ ಗ್ರಾಮದವರು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ನಮ್ಮ ಮತ್ತು ಅವರ ಗ್ರಾಮಕ್ಕೆ ಸುಮಾರು 1 ಕಿ.ಮೀ ದೂರವಿರುತ್ತದೆ ಎನ್ನುವರು. 2 ನೇ ಪ್ರತಿವಾದಿಗೆ ಕರುಳಿನ ಸಂಬಂಧವಾಗಿ ಶಸ್ತ್ರಚಿಕಿತ್ಸೆ ಆಗಿರುತ್ತದೆ ಎಂದರೆ ಗೊತ್ತಿಲ್ಲ. ಸದರಿ ಶಸ್ತ್ರಚಿಕಿತ್ಸೆಗೆ ಸುಮಾರು 5-6 ಲಕ್ಷ ಖರ್ಚಾಗಿರುತ್ತದೆ ಎಂದರೆ ಗೊತ್ತಿಲ್ಲ. ಸದರಿ ಶಸ್ತ್ರಚಿಕಿತ್ಸೆಯಾದ ಕಾರಣ 2 ನೇ ಪ್ರತಿವಾದಿ ಜಮೀನನ್ನು ಉಳುಮೆ ಮಾಡಲಾಗುವುದಿಲ್ಲ ಎಂದರೆ ಗೊತ್ತಿಲ್ಲ. 2 ನೇ ಪ್ರತಿವಾದಿ ಉಳುಮೆ ಮಾಡಲಾಗದ ಕಾರಣ 3 ನೇ ಪ್ರತಿವಾದಿಗೆ ದಾವಾಸ್ವತ್ತನ್ನು ದಾನವಾಗಿ ನೀಡಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿ ಅವರ ಹೆಂಡತಿ ಜೊತೆ ಇತ್ತೀಚೆಗೆ ಹೆಚ್.ಡಿ.ಕೋಟೆಯಲ್ಲಿ ವಾಸ ಮಾಡುತ್ತಿದ್ದಾರೆ. ಆತ ಸುಮಾರು 2-3 ವರ್ಷದಿಂದ ಹೆಚ್.ಡಿ.ಕೋಟೆಯಲ್ಲಿ ವಾಸ ಮಾಡುತ್ತಿದ್ದಾರೆ.

1 ನೇ ಪ್ರತಿವಾದಿಗೆ 3 ಜನ ಮಕ್ಕಳು. 3 ನೇ ಪ್ರತಿವಾದಿ ತಾನು ಮಾಡಿಕೊಂಡ ಸಾಲ ತೀರಿಸುವ ಸಲುವಾಗಿ ಸೋಮೇಶ್ ಎಂಬುವವರಿಗೆ ದಾವಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ, ಸಾಕ್ಷಿ ಮುಂದುವರಿದು ನ್ಯಾಯಾಲಯದ ತಾತ್ಕಾಲಿಕ ಆದೇಶವಿದ್ದರೂ ಸಹ ಅದನ್ನು ಅಕ್ರಮವಾಗಿ ಮಾರಾಟ ಮಾಡಿರುತ್ತಾರೆ ಎನ್ನುವರು. ಕೋರೋನ ಬಂದ ಕಾರಣ ಅವರಿಗೆ ಯಾವುದೇ ಆದಾಯ ಇರಲಿಲ್ಲ, ಆ ಕಾರಣ ದಾವಾಸ್ವತ್ತನ್ನು ಮಾರಾಟ ಮಾಡುವ ಸಂದರ್ಭ ಉಂಟಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಉದ್ದೇಶಪೂರ್ವಕಾವಗಿ ಮಾರಾಟ ಮಾಡಿರುತ್ತಾರೆ ಎನ್ನುವರು. 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಗೆ ದಾನಪತ್ರ ಮಾಡಿದ 1 ತಿಂಗಳ ನಂತರ ವಿಷಯ ನನಗೆ ತಿಳಿದು ಬಂದಿರುತ್ತದೆ. 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಗೆ ಅಕ್ರಮವಾಗಿ ದಾನಪತ್ರ ಮಾಡಿದ ಬಗ್ಗೆ ನೋಟಿಸ್ ನೀಡಿರುವುದಿಲ್ಲ, ಆದರೆ ಈ ದಾವೆಯನ್ನು ಹೂಡಿರುತ್ತೇನೆ. ನನ್ನ ತಂದೆ ದಾವಸ್ವತ್ತನ್ನು ದಿನಾಂಕ 7.11.1967 ರಲ್ಲಿ ವೆಂಕಟೇಗೌಡರವರಿಗೆ ಶುದ್ಧ ಕ್ರಯಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರದ ಆಧಾರದ ಮೇಲೆ ವೆಂಕಟೇಗೌಡ ರವರು ದಾವಾಸ್ವತ್ತಿನ ಸಂಪೂರ್ಣ ಮಾಲೀಕರು ಎಂದರೆ ಸರಿಯಲ್ಲ. ಸದರಿ ಕ್ರಯಪತ್ರದ ದಿನದಿಂದ ನನ್ನ ತಂದೆ ಅಥವಾ ನಾವಾಗಲಿ ಸ್ವಾಧೀನ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ಈ ದಾವೆ ಹೂಡುವ ದಿನಾಂಕದಂದು ನಾನು ಸ್ವಾಧೀನ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ನಾನು 2 ಮತ್ತು 3 ನೇ ಪ್ರತಿವಾದಿಗೆ ತೊಂದರೆ ಕೊಡಲು ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ತಂದೆಗೆ ದಾವಾಸ್ವತ್ತು ಮಾರಾಟ ಮಾಡಿರುವ ವಿಚಾರ ತಿಳಿದಿತ್ತು ಎಂದರೆ ಸರಿಯಲ್ಲ. ಸದರಿ ಮಾರಾಟ ಮಾಡಿರುವ ವಿಚಾರ ತಿಳಿದಿದ್ದ ಕಾರಣ ಆತ ಕ್ರಯಪತ್ರವನ್ನು ಎಂದಿಗೂ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತು ಈಗಾಗಲೇ ನನ್ನ ತಂದೆ ಮಾರಾಟ ಮಾಡಿದ ಕಾರಣ ಅದರಲ್ಲಿ ನಮಗೆ ಯಾವುದೇ

ಹಕ್ಕು ಇರುವುದಿಲ್ಲ, ಆ ಕಾರಣ ಈ ದಾವೆ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಸುಳ್ಳು ಕ್ರಯ ಎನ್ನುವರು.

<u>ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ವಕೀಲರಿಂದಃ</u>

ಮೇಲೆ ಇರುವ ಪಾಟೀ ಸವಾಲನ್ನೇ ತಮ್ಮ ಪರ ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.